ವಿ-72-36

ರಾಜ್ಯ ಸರ್ಕಾರದಿಂದ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಖಾದಿ ಮತ್ತು ಗ್ರಾಮೋದ್ಯೋಗ ಸಂಘ/ಸಂಸ್ಥೆಗಳಿಗೆ 2013–14 ರಿಂದ 2019–20ನೇ ಸಾಲಿನವರೆಗೆ ಮಾರುಕಟ್ಟೆ ಅಭಿವೃದ್ಧಿ ಪ್ರೋತ್ಸಾಹ ಮಜೂರಿ ಮೊತ್ತ ಒಟ್ಟು ರೂ.8353.47 ಲಕ್ಷಗಳು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ತದನಂತರದಲ್ಲಿ, ಕೆ.ವಿ.ಐ.ಬಿ. ಸಂಸ್ಥೆಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ 2013–14 ರಿಂದ 2019–20ನೇ ಸಾಲಿನವರೆಗೆ ಪ್ರೋತ್ಸಾಹ ಮಜೂರಿ ಒಟ್ಟು ರೂ.13344.90 ಲಕ್ಷ ಸಲ್ಲಿಕೆಯಾಗಿದ್ದು ಹಿಂಬಾಕಿ ರೂ.4991.43 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಲಾಗಿರುತ್ತದೆ.

2013–14 ಸಾಲಿನಿಂದ 2019–20 ನೇ ಸಾಲಿನ ವರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಪ್ರೋತ್ಸಾಹ ಮಜೂರಿ ಅನುದಾನ ಹಾಗೂ ಬಾಕಿ ಮೊತ್ತದ ವಿವರ.

ರೂ. ಲಕ್ಷಗಳಲ್ಲಿ

| ಕ್ರ.ಸಂ | ವರ್ಷ | ಸಂಘ/ಸಂಸ್ಥೆಗಳಿಂದ ಸ್ವೀಕರಿಸಲಾದ ಪ್ರೋತ್ಸಾಹ ಮಜೂರಿ ಬಿಲ್ಲುಗಳ ಮೊತ್ತ | ಸರ್ಕಾರದಿಂದ ಹಂಚಿಕೆ ಮಾಡಿ ಬಿಡುಗಡೆ ಮಾಡಿದ ಮೊತ್ತ | ಬಾಕಿ ಮೊತ್ತ |
|---|---|---|---|---|
| 1 | 2013–14 | 400.96 | 398.47 | 2.49 |
| 2 | 2014–15 | 1405.54 | 1400.00 | 5.54 |
| 3 | 2015–16 | 1001.36 | 950.00 | 51.36 |
| 4 | 2016–17 | 1904.83 | 1100.00 | 804.83 |
| 5 | 2017–18 | 1947.49 | 1700.00 | 247.49 |
| 6 | 2018–19 | 2914.6 | 1425.00 | 1489.6 |
| 7 | 2019–20 | 3770.12 | 1380.00 | 2390.12 |
| | | **13344.9** | **8353.47** | **4991.43** |

ವರ್ಷಾನುವರ್ಷ ಎಂ.ಡಿ.ಎ. ಮತ್ತು ಪ್ರೋತ್ಸಾಹ ಮಜೂರಿ ಬೇಡಿಕೆಯ ಪ್ರಮಾಣ ಹೆಚ್ಚುತ್ತಿರುವುದರಿಂದ ಬೇಡಿಕೆ ಪ್ರಸ್ತಾವನೆಗಳನ್ನು ವಾರ್ಷಿಕ ರೂ.15.00 ಕೋಟಿಗಳ ಮಿತಿಯಲ್ಲಿ ನಿರ್ವಹಿಸಬೇಕೆಂದು ಕೆ.ವಿ.ಐ.ಬಿ. ಸಂಸ್ಥೆಗೆ ತಿಳಿಸಲಾಗಿರುತ್ತದೆ. ಅದರಂತೆ, ಸರ್ಕಾರದ ಸೇರ್ಪಡೆ ಆದೇಶ ದಿನಾಂಕ: 09.10.2020ರಲ್ಲಿ ಶೇಕಡವಾರು ಪ್ರೋರೇಟಾ ಎಂ.ಡಿ.ಎ. ಮತ್ತು ಪ್ರೋರೇಟಾ ಮಜೂರಿ ನಿಗಧಿಗೊಳಿಸಿ ಆದೇಶ ಹೊರಡಿಸಲಾಗಿರುತ್ತದೆ. 2013–14 ರಿಂದ 2019–20 ರವರೆಗಿನ ಹಿಂಬಾಕಿ ಎಂ.ಡಿ.ಎ. ಮೊತ್ತ ರೂ.5564.50 ಲಕ್ಷ ಮತ್ತು ಪ್ರೋರೇಟಾ ಮಜೂರಿ ಮೊತ್ತ ರೂ.4991.43 ಲಕ್ಷಗಳನ್ನು ಬಿಡುಗಡೆ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುತ್ತದೆ.

ಸಿಐ 150 ಸಿಎಸ್‌ಸಿ 2020

ಬಿ.ಎಸ್.

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿಗಳು.

## ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪರವರಿಂದ ನಿಯಮ-72 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಉತ್ತರ.

**ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯು ನೂಲುಗರು ಮತ್ತು ನೇಕಾರರ ಸಹಾಯಕ್ಕಾಗಿ ಅವರು ತಯಾರಿಸಿದ ಉತ್ಪನ್ನಗಳನ್ನು ವಸ್ತು ಪ್ರದರ್ಶನ ಹಾಗೂ ಖಾದಿ ಗ್ರಾಮೋದ್ಯೋಗ ಮಳಿಗೆಗಳ ಮುಖಾಂತರ ಮಾರಾಟ ಮಾಡಲು ವ್ಯವಸ್ಥೆಗೊಳಿಸಿ ಆ ಮೂಲಕ ಅವರಿಗೆ ಸಹಾಯಧನ ನೀಡಲಾಗುತ್ತಿತ್ತು. ಆದರೆ, ನೂಲುವಿಕೆ ಮತ್ತು ನೇಕಾರಿಕೆಯನ್ನೇ ಜೀವನೋಪಾಯ ಮಾಡಿಕೊಂಡು ಬದುಕು ನಡೆಸುವ 17000 ಕುಟುಂಬದವರಿಗೆ ಕಳೆದ 05 ವರ್ಷಗಳಿಂದ ಯಾವುದೇ ಸಹಾಯಧನ ನೀಡದಿರುವ ಪ್ರಯುಕ್ತ ನೂಲುಗರು ಮತ್ತು ನೇಕಾರರ ಬದುಕು ಬೀದಿ ಪಾಲಾಗಿರುವ ಬಗ್ಗೆ ಮಾನ್ಯ ಜವಳಿ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಗಮನ ಸೆಳೆಯಬಯಸುತ್ತೇನೆ.**

ರಾಜ್ಯ ಸರ್ಕಾರದಿಂದ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ವತಿಯಿಂದ ಖಾದಿ ಮತ್ತು ಗ್ರಾಮೋದ್ಯೋಗ ಸಂಘ/ಸಂಸ್ಥೆಗಳಿಗೆ 2013-14 ರಿಂದ 2019-20ನೇ ಸಾಲಿನವರೆಗೆ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂ.ಡಿ.ಎ) ಮೊತ್ತ ಒಟ್ಟು ರೂ.9,145.00 ಲಕ್ಷಗಳು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ.

ತದನಂತರದಲ್ಲಿ, ಕೆ.ವಿ.ಐ.ಬಿ. ಸಂಸ್ಥೆಯು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ 2013-14 ರಿಂದ 2019-20ನೇ ಸಾಲಿನವರೆಗೆ ಎಂ.ಡಿ.ಎ. ಬೇಡಿಕೆಯು ಒಟ್ಟು ರೂ.14709.50 ಲಕ್ಷ ಸಲ್ಲಿಕೆಯಾಗಿದ್ದು ಹಿಂಬಾಕಿ ರೂ.5564.50 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಲಾಗಿರುತ್ತದೆ.

ಹಿಂಬಾಕಿ ಉಳಿದಿರುವ ವರ್ಷವಾರು ವಿವರಗಳು ಈ ಕೆಳಗಿನಂತಿವೆ.

2013-14 ಸಾಲಿನಿಂದ 2019-20 ನೇ ಸಾಲಿನವರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ (ಎಂ.ಡಿ.ಎ) ಹಾಗೂ ಬಾಕಿ ಮೊತ್ತದ ವಿವರ.

ರೂ. ಲಕ್ಷಗಳಲ್ಲಿ

| ಕ್ರ.ಸಂ | ವರ್ಷ | ಸಂಘ/ಸಂಸ್ಥೆಗಳಿಂದ ಸ್ವೀಕರಿಸಲಾದ ಎಂ.ಡಿ.ಎ ಬಿಲ್ಲುಗಳ ಮೊತ್ತ | ಸರ್ಕಾರದಿಂದ ಹಂಚಿಕೆಮಾಡಿ ಬಿಡುಗಡೆ ಮಾಡಿದ ಮೊತ್ತ | ಬಾಕಿ ಮೊತ್ತ |
|---|---|---|---|---|
| 1 | 2013-14 | 875.96 | 870.00 | 5.96 |
| 2 | 2014-15 | 967.81 | 950.00 | 17.81 |
| 3 | 2015-16 | 1268.59 | 1200.00 | 68.59 |
| 4 | 2016-17 | 1744.8 | 1500.00 | 244.8 |
| 5 | 2017-18 | 2064.89 | 1700.00 | 364.89 |
| 6 | 2018-19 | 3315.77 | 1425.00 | 1890.77 |
| 7 | 2019-20 | 4471.68 | 1500.00 | 2971.68 |
| | | **14709.5** | **9145.00** | **5564.5** |